# ಭಾರತದ ಪ್ರಜಾತಂತ್ರ: ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಗಳು

**ಆಶಾಲತಾ ಪಿ.**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಗೋವಿಂದದಾಸ ಕಾಲೇಜು, ಸುರತ್ಕಲ್, ಮಂಗಳೂರು.

DOI: https://doi.org/10.5281/zenodo.15504104

## ABSTRACT:

ಭಾರತದಲ್ಲಿ ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ, ಮಹಿಳಾ ಹಕ್ಕುಗಳ ಬಗೆಗೆ ತೀವ್ರವಾಗಿ ಚಿಂತಿಸಿ, ಆ ಸಾಮಾಜಿಕ ಸುಧಾರಣೆಗಳಿಗೆ ಕಾನೂನಿನ ಚೌಕಟ್ಟು ಅವಶ್ಯವೆಂದು, ಭಾರತದ ಸಂವಿಧಾನದಲ್ಲಿ ಆ ಮೌಲ್ಯಗಳನ್ನು ಹಲವಾರು ವಿಧಿಗಳ ರೂಪದಲ್ಲಿ ಕ್ರೋಢೀಕರಿಸಿ, ಶೋಷಿತ ಸಮುದಾಯಗಳಲ್ಲಿ ಸ್ವಾಭಿಮಾನ, ಆತ್ಮಗೌರವ ಮತ್ತು ಅನ್ಯಾಯಗಳ ವಿರುದ್ಧ ಹೋರಾಟದ ಮನೋಭಾವವನ್ನು ಮೂಡಿಸಿದ ಮಹಾನ್ ಮಾನವತಾವಾದಿ, ಸಂವಿಧಾನಶಿಲ್ಪಿ, ಅರ್ಥಶಾಸ್ತ್ರಜ್ಞ, ಕಾನೂನು ತಜ್ಞ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು. ಮೂಲತ ಅಂಬೇಡ್ಕರ್‌ರವರು, ಬೆಳೆದು ಬಂದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು, ಅಸ್ಪೃಶ್ಯತೆ, ಬಡತನ, ದೌರ್ಜನ್ಯ ಈ ಎಲ್ಲಾ ಜಾತಿಯ ಅಸಮಾನತೆಗಳ ಭೀತಿಗಳನ್ನು, ಒಳಗೊಂಡ ಸಮಾಜವಾಗಿತ್ತು. ಹಾಗಾಗಿ ಸಹಜವಾಗಿಯೇ ಶೋಷಿತ ಸಮುದಾಯಗಳ ಶೋಷಣೆಯ ವಿವಿಧ ಸ್ವರೂಪಗಳು ಅವರ ಹೋರಾಟಗಳಲ್ಲಿ ಪ್ರತಿಫಲನಗೊಂಡಿವೆ. ಈ ಮೂಲಭೂತವಾದ ವಿಚಾರಗಳನ್ನು ಪ್ರಧಾನವಾಗಿಟ್ಟುಕೊಂಡು, ಒಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಆಯ್ದ ಬರಹಗಳು, ಹೋರಾಟಗಳು, ಮತ್ತು ಹೋರಾಟದ ಭಾಗವಾಗಿ ಎತ್ತಿರುವ ಮೂಲಭೂತ ಪ್ರಶ್ನೆಗಳನ್ನು ಈ ಸಂಶೋಧನಾ ಬರಹದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಮುಂದುವರಿದು, ಅಂಬೇಡ್ಕರ್‌ರವರು ದಲಿತ ವಿಮೋಚಕ, ಸಂವಿಧಾನ ಶಿಲ್ಪಿ, ಮೀಸಲಾತಿ ಕಾನೂನುಬದ್ಧಗೊಳಿಸಿದ ದಲಿತ ಹೋರಾಟಗಾರ; ಈ ಸೀಮಿತ ಚೌಕಟ್ಟನ್ನು ಮೀರಿ ಅವರ ಬದುಕು ಮತ್ತು ಹೋರಾಟಗಳನ್ನು ಗುರುತಿಸುವ ಪ್ರಯತ್ನ, ಅವರ ಬರವಣಿಗೆಗಳಲ್ಲಿ ಅಭಿವ್ಯಕ್ತಗೊಂಡಿರುವ ಸಮಾಜಮುಖಿ ಚಿಂತನೆಗಳು, ಮತ್ತು ಭಾರತದ ಪ್ರಜಾತಂತ್ರ ವ್ಯವಸ್ಥೆಯ ಸ್ಥಾಪಕರಾಗಿ ಮತ್ತು ಪ್ರತಿಪಾದಕರಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ವಿಚಾರಧಾರೆಗಳು, ಪ್ರಸ್ತುತ ಭಾರತ ಎದುರಿಸುತ್ತಿರುವ ಸವಾಲುಗಳ ನೆಲೆಯಲ್ಲಿ ಅವರ ಚಿಂತನೆಗಳ ಪ್ರಸ್ತುತತೆ ಈ ಮೂಲಭೂತವಾದ ವಿಚಾರಗಳನ್ನು ಪ್ರಧಾನವಾಗಿ ಚರ್ಚೆ ಮಾಡಲಾಗಿದೆ. ಅಂತಿಮವಾಗಿ, ಈ ಸಂಶೋಧನಾ ಬರಹ, ಎಲ್ಲಾ ತಾರತಮ್ಯಗಳನ್ನು ಮೀರಿದ ಮಾನವತಾ ಸಮಾಜ, ಎಲ್ಲರನ್ನು ಒಳಗೊಳ್ಳುವ, ಎಲ್ಲರ ಅಭಿವೃದ್ಧಿಗೆ ಶ್ರಮಿಸುವ ದೌರ್ಜನ್ಯ ಮುಕ್ತ ಸಮಾಜವಾಗಿ, ರೂಪಿಸುವ ಮತ್ತು ಧ್ವನಿಯಿಲ್ಲದ ಸಮುದಾಯಗಳಿಗೆ ಧ್ವನಿಯಾಗುವ ಮಹತ್ವಪೂರ್ಣ ಸಾಂವಿಧಾನಿಕ ಜವಾಬ್ದಾರಿಗಳ ಭಾಗವಾಗಿ ಅಂಬೇಡ್ಕರ್ ಚಿಂತನೆಗಳು ಪ್ರಸ್ತುತವೆಂದು, ಖಾತರಿಪಡಿಸುತ್ತದೆ.

**KEYWORDS:**

ಅಂಬೇಡ್ಕರ್, ಹೋರಾಟ, ದಲಿತ, ಸಂವಿಧಾನ, ಹಕ್ಕುಗಳು.

ಭಾರತದಲ್ಲಿ ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ, ಮಹಿಳಾ ಹಕ್ಕುಗಳ ಬಗೆಗೆ ತೀವ್ರವಾಗಿ ಚಿಂತಿಸಿ, ಆ ಸಾಮಾಜಿಕ ಸುಧಾರಣೆಗಳಿಗೆ ಕಾನೂನಿನ ಚೌಕಟ್ಟು ಅವಶ್ಯವೆಂದು, ಭಾರತದ ಸಂವಿಧಾನದಲ್ಲಿ ಆ ಮೌಲ್ಯಗಳನ್ನು ಹಲವಾರು ವಿಧಿಗಳ ರೂಪದಲ್ಲಿ ಕ್ರೋಢೀಕರಿಸಿ, ಶೋಷಿತ ಸಮುದಾಯಗಳಲ್ಲಿ ಸ್ವಾಭಿಮಾನ, ಆತ್ಮಗೌರವ ಮತ್ತು ಅನ್ಯಾಯಗಳ ವಿರುದ್ಧ ಹೋರಾಟದ ಮನೋಭಾವವನ್ನು ಮೂಡಿಸಿದ ಮಹಾನ್ ಮಾನವತಾವಾದಿ, ಸಂವಿಧಾನಶಿಲ್ಪಿ, ಅರ್ಥಶಾಸ್ತ್ರಜ್ಞ, ಕಾನೂನು ತಜ್ಞ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು. ಒಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಹೋರಾಟಗಳು, ಹೋರಾಟದ ಭಾಗವಾಗಿ ಎತ್ತಿರುವ ಮೂಲಭೂತ ಪ್ರಶ್ನೆಗಳು ಮತ್ತು ಅವರ ಆಯ್ದ ಪ್ರಮುಖ ಬರಹಗಳನ್ನು, ಅವರ ಚಿಂತನೆಗಳನ್ನು ಈ ಸಂಶೋಧನಾ ಬರಹದಲ್ಲಿ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ. ಅಂಬೇಡ್ಕರ್‌ರವರು ದಲಿತ ವಿಮೋಚನೆಯ ಚಿಂತಕ, ಸಂವಿಧಾನ ಶಿಲ್ಪಿ, ಮೀಸಲಾತಿಯನ್ನು ಕಾನೂನುಬದ್ಧಗೊಳಿಸಿದ ದಲಿತ ಹೋರಾಟಗಾರ; ಈ ಸೀಮಿತ ಚೌಕಟ್ಟನ್ನು ಮೀರಿ ಅವರ ಬದುಕು, ವ್ಯಕ್ತಿತ್ವ, ಬರವಣಿಗೆ ಮತ್ತು ಸಂವಾದಗಳನ್ನು ಗುರುತಿಸುವ ಪ್ರಯತ್ನ, ಅವರ ಬರವಣಿಗೆಗಳಲ್ಲಿ ಅಭಿವ್ಯಕ್ತಗೊಂಡಿರುವ ಮೂಲಭೂತ ಪ್ರಶ್ನೆಗಳು/ಸಮಾಜಮುಖಿ ಚಿಂತನೆಗಳು, ಮತ್ತು ಭಾರತದ ಪ್ರಜಾತಂತ್ರ ವ್ಯವಸ್ಥೆಯ ಸ್ಥಾಪಕರಾಗಿ ಮತ್ತು ಪ್ರತಿಪಾದಕರಾಗಿ, ಪ್ರಸ್ತುತ ಭಾರತ ಎದುರಿಸುತ್ತಿರುವ ಸವಾಲುಗಳ ನೆಲೆಯಲ್ಲಿ ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ ಈ ಮೂಲಭೂತವಾದ ವಿಚಾರಗಳನ್ನು ಪ್ರಧಾನವಾಗಿಟ್ಟುಕೊಂಡು, ಈ ಸಂಶೋಧನಾ ಬರಹದಲ್ಲಿ ಚರ್ಚೆ ಮಾಡಲಾಗಿದೆ.

ಅಂಬೇಡ್ಕರ್‌ರವರು, ಬೆಳೆದು ಬಂದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು, ಸಹಜವಾಗಿಯೇ ಜಾತಿಯ ಅಸಮಾನತೆ, ಅಸ್ಪೃಶ್ಯತೆ, ಬಡತನ, ದೌರ್ಜನ್ಯ ಈ ಎಲ್ಲಾ ಭೀತಿಗಳನ್ನು, ಹಿಂಸೆಗಳನ್ನು ಒಳಗೊಂಡ ಬದುಕಾಗಿತ್ತು. ಹಾಗಾಗಿ ಸಹಜವಾಗಿಯೇ ದಲಿತರ ಮತ್ತು ಶೋಷಿತರ ಶೋಷಣೆಯ ವಿವಿಧ ಮಜಲುಗಳು ಅವರ ಹೋರಾಟಗಳಲ್ಲಿ ಪ್ರತಿಫಲನಗೊಂಡಿವೆ. ಆದರೆ ಅಂಬೇಡ್ಕರ್‌ರವರು, ಆ ಭೀತಿಗಳನ್ನು ನಿರ್ವಹಿಸುವ/ನಿರ್ವಹಿಸಿದ ಮಾದರಿ ಭಿನ್ನವಾಗಿದ್ದು, ಭೀತಿಗಳಿಂದ ಹೊರಬರುವ ದಾರಿಗಳಿಗೆ ಹೆಚ್ಚು ಮಹತ್ವ ನೀಡುವಂತದ್ದು ಗಮನಿಸಬೇಕಾದ ಅಂಶ. ಅವರು ತಮ್ಮ ಬರಹಗಳುದ್ದಕ್ಕೂ ಸ್ವಾತಂತ್ರ್ಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳ ಪ್ರಶ್ನೆಗಳನ್ನು

ಎತ್ತುತ್ತಾರೆ. 1946ನೇ ವರ್ಷದಲ್ಲಿ ವಸಾಹತುಶಾಹಿ ಆಡಳಿತ ವ್ಯವಸ್ಥೆ ಅಂತ್ಯಗೊಳ್ಳುತ್ತಿರುವ ಸಂದರ್ಭದಲ್ಲಿ ಸ್ವತಂತ್ರ ದೇಶದ, ಪ್ರಭುತ್ವದ ರೂಪುರೇಷೆಗಳನ್ನು ನಿರ್ಧರಿಸುವುದಕ್ಕಾಗಿ ರಚನೆಯಾದ ಸಂವಿಧಾನ ಸಭೆಗೆ, ಆಬ್ಜೆಕ್ಟಿವ್ ರೆಸಲ್ಯೂಷನ್ ಸಮಿತಿ ನೇತೃತ್ವ ವಹಿಸಿದ್ದ ಪಂಡಿತ್ ಜವಾಹರ್‌ಲಾಲ್ ನೆಹರೂರವರು, ವೈವಿಧ್ಯತೆಯನ್ನು ಪ್ರಧಾನವಾಗಿಟ್ಟುಕೊಂಡು, ಸಮಾಜವಾದಿ, ಪ್ರಜಾಸತ್ತಾತ್ಮಕ ಭಾರತದ ರೂಪುರೇಷೆ ನೀಡಿ ಎಲ್ಲರಿಗೂ, ಮೂಲಭೂತ ಹಕ್ಕುಗಳು, ಬದುಕುವ ಹಕ್ಕು, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದು ಸಂವಿಧಾನದ ಧ್ಯೇಯ ಕರ್ತವ್ಯವಾಗಬೇಕಂಬ ಮೂಲಭೂತ ಅಂಶಗಳನ್ನು ಮಂಡಿಸುತ್ತಾರೆ. ಆದರೆ ಅಂಬೇಡ್ಕರ್‌ರವರು, "ಹಕ್ಕುಗಳಿಗೆ ರಕ್ಷಣೆ ಇದ್ದಾಗ ಮಾತ್ರ ಅವು ಪ್ರಾಯೋಗಿಕವಾಗಿರುತ್ತವೆ; ಮೂಲಭೂತ ಹಕ್ಕುಗಳ ಮೇಲೆ ಆಕ್ರಮಣ ನಡೆದಾಗ ಸೂಕ್ತ ಕಾನೂನಿನ ರಕ್ಷಣೆ ಇಲ್ಲದಿದ್ದಲ್ಲಿ, ಅಂತಹ ಹಕ್ಕುಗಳು ನಿರರ್ಥಕ; ಆದುದರಿಂದ ಹಕ್ಕುಗಳು ಸಾಂವಿಧಾನಿಕವಾಗಿರಬೇಕು" ಎನ್ನುವ ಪ್ರತಿಕ್ರಿಯೆಗಳನ್ನು ನೆಹರೂರವರ ಆಲೋಚನೆಗೆ ವ್ಯತಿರಿಕ್ತವಾಗಿ, ಮಂಡಿಸಿದರು. ಸಂವಿಧಾನ ನೀಡುವ ಹಕ್ಕುಗಳ ಬದಲಾಗಿ, ಹಕ್ಕುಗಳು ಬಲಾಢ್ಯರಿಂದ ಉಲ್ಲಂಘನೆಯಾದಾಗ, ಸಂವಿಧಾನ ನೀಡುವ ಪರಿಹಾರ ಕ್ರಮಗಳ ಬಗ್ಗೆ ಹೆಚ್ಚು ಉತ್ಸುಕರಾಗಿದ್ದ ಅವರು ಸಂವಿಧಾನದ ವಿಧಿ 32ನ್ನು ಸಂವಿಧಾನದ ಆತ್ಮ ಎಂದು ಪರಿಗಣಿಸಿರುವುದು ಗಮನಾರ್ಹವಾದ ಅಂಶ. ಹೀಗೆ ಭಾರತದ ಎಲ್ಲಾ ಶೋಷಿತ ಸಮುದಾಯಗಳ ಬದುಕನ್ನು ಪ್ರಧಾನವಾಗಿಟ್ಟುಕೊಂಡು, ಶೋಷಣೆಯ ವಿವಿಧ ಸ್ತರಗಳನ್ನು ಅಧ್ಯಯನ ಮಾಡಿ ಆ ಮೂಲಕ ಕಂಡುಕೊಂಡ ಪರಿಹಾರಗಳಿಗೆ ಕಾನೂನಿನ ಚೌಕಟ್ಟು ಅವಶ್ಯವೆಂದು ಭಾರತದ ಸಂವಿಧಾನದಲ್ಲಿ ಆ ಮೌಲ್ಯಗಳನ್ನು ಸಂವಿಧಾನದ ಪೂರ್ವಪೀಠಿಕೆ, ಮೂಲಭೂತ ಹಕ್ಕುಗಳು, ರಾಜ್ಯ ನಿರ್ದೇಶಕ ತತ್ವಗಳ ಮೂಲಕ ಕ್ರೋಢೀಕರಿಸಿದ್ದರೂ, ಕೇವಲ ನಿರ್ದಿಷ್ಟ ಜನಸಮುದಾಯಗಳ ಹಿತಾಸಕ್ತಿಯ ಸಂಕೇತವಾಗಿ ಅಂಬೇಡ್ಕರ್‌ರವರನ್ನು ಇಂದಿನ ಕಾಲಘಟ್ಟದವರೆಗೂ ನಿರೂಪಿಸಿರುವುದು ಬಹಳ ಅಪಾಯಕಾರಿಯಾದ ದುರದೃಷ್ಟದ ಬೆಳವಣಿಗೆಯೂ ಹೌದು.

ಅಂಬೇಡ್ಕರ್‌ರವರು 1919ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುತ್ತಿರುವ ವೇಳೆಯಲ್ಲಿ "ಕಾಸ್ಟ್ ಇನ್ ಇಂಡಿಯಾ" ಎಂಬ ಪ್ರಬಂಧ; ಬರ್ಟ್ ಆಂಡ್ ರೆಸಲ್ಲರವರ "ರೀ ಕನ್‌ಸ್ಟ್ರಕ್ಷನ್ ಆಫ್ ಇಂಡಿಯನ್ ಸೊಸೈಟಿ" ಎಂಬ ಕೃತಿಗೆ ವಿಮರ್ಶೆ; ಸ್ವತಂತ್ರ ಕಾರ್ಮಿಕರ ಪಕ್ಷದ ಸ್ಥಾಪನೆ; 1928ರಲ್ಲಿ ತಮ್ಮ ಪಿ. ಎಚ್. ಡಿ. ಸಂಶೋಧನೆಗಾಗಿ "ಪ್ರಾಬ್ಲೆಮ್ ಆಫ್ ರುಪೀಸ್–ಇಟ್ಸ್ ಪ್ರಾಬ್ಲೆಮ್ಸ್ ಆಂಡ್ ಸೊಲ್ಯೂಷನ್" ಎಂಬ ವಿಷಯದ ಮೇಲೆ ಅಧ್ಯಯನ; 1936ರಲ್ಲಿ "ಜಾತಿ ವಿನಾಶ" ಎಂಬ ಕೃತಿ; "ದ ರೈಸ್ ಆಂಡ್ ಪಾಲ್ ಆಫ್ ಹಿಂದೂ ವುಮೆನ್"; 1942ರಲ್ಲಿ

ಅಖಿಲ ಭಾರತ ಮಹಿಳಾ ಸಮಾವೇಶ; 1946ರಲ್ಲಿ "ಸ್ಟೇಟ್ಸ್ ಆಂಡ್ ಮೈನಾರಿಟೀಸ್"; 1945 ರಲ್ಲಿ ಪೀಪಲ್ಸ್ ಎಜುಕೇಶನ್ ಸೊಸೈಟಿ ಸ್ಥಾಪನೆ; 1939ರಲ್ಲಿ "ಫೆಡರೇಶನ್ ವರ್ಸಸ್ ಫ್ರೀಡಮ್", "ಹಿಸ್ಟರಿ ಆಫ್ ಇಂಡಿಯನ್ ಕರೆನ್ಸಿ ಆಂಡ್ ಬ್ಯಾಂಕಿಂಗ್"; "ಸ್ಮಾಲ್ ಫಾರ್ಮರ್ಸ್, ದೆಯರ್ ಪ್ರಾಬ್ಲೆಮ್ಸ್ ಆಂಡ್ ರೆಮೆಡೀಸ್" ಎನ್ನುವ ಕೃತಿ; ವಾಟರ್ ಪಾಲಿಸೀಸ್; 'ಎಗ್ರಿಕಲ್ಚರಲ್ ಆಂಡ್ ಕಾರ್ಪರೇಟಿವ್ ಬ್ಯಾಂಕ್"; "ಥಾಟ್ಸ್ ಆನ್ ಲಿಂಗ್ವಿಸ್ಟಿಕ್ ಮೈನಾರಿಟೀಸ್"; ರಿಸರ್ವ್ ಬ್ಯಾಂಕ್ ನೀತಿಗಳು ಹಾಗೂ ಮಹಿಳೆಯರ ಆಸ್ತಿಯ ಹಕ್ಕು, ಆಸ್ತಿಯ ಹಂಚಿಕೆ, ಆಸ್ತಿಯ ವಾರಸುದಾರಿತನ, ಜೀವನಾಂಶ, ಮದುವೆ, ವಿಚ್ಛೇದನ, ದತ್ತುಸ್ವೀಕಾರ ನೀತಿಗಳನ್ನೊಳಗೊಂಡಂತೆ ರಚನೆಯಾದ "ಹಿಂದೂ ಕೋಡ್ ಬಿಲ್", ಹೆರಿಗೆ ಭತ್ಯೆ ಕಾನೂನು; ಮಹಡ ಸತ್ಯಾಗ್ರಹ, ಮೂಕನಾಯಕ ಮತ್ತು ಬಹಿಷ್ಕೃತ ಭಾರತ ದಿನಪತ್ರಿಕೆಗಳು ಒಟ್ಟಾರೆ 1919ರಿಂದ ತಮ್ಮ ಕೊನೆಯ ದಿನಗಳವರೆಗೆ ಬರೆದಿರುವ ಪುಸ್ತಕಗಳು, ಸಂಘಟಿಸಿದ ಚಳವಳಿಗಳು, ಹೋರಾಟದ ಮಾರ್ಗ, ಹೋರಾಟದ ಭಾಗವಾಗಿ ಎತ್ತಿರುವ ಮೂಲಭೂತ ಪ್ರಶ್ನೆಗಳು ಇವೆಲ್ಲವು ಅಂಬೇಡ್ಕರ್‌ರವರು ಮಾನವ ಹಕ್ಕುಗಳ ಹೋರಾಟಗಾರನಾಗಿ, ಸಮಾಜಶಾಸ್ತ್ರಜ್ಞನಾಗಿ, ಸ್ತ್ರೀವಾದಿಯಾಗಿ, ಅರ್ಥಶಾಸ್ತ್ರಜ್ಞನಾಗಿ, ವಾಣಿಜ್ಯಶಾಸ್ತ್ರಜ್ಞನಾಗಿ, ಕಾನೂನುತಜ್ಞರಾಗಿ, ನೀರಾವರಿ ತಜ್ಞರಾಗಿ ದೇಶದ ಏಕತೆ ಮತ್ತು ಸಮಗ್ರತೆಯನ್ನು ಕೇಂದ್ರವಾಗಿರಿಸಿಕೊಂಡು ನವಭಾರತ ನಿರ್ಮಾಣ ಪ್ರಕ್ರಿಯೆಯಲ್ಲಿ ಕಾರ್ಯೋನ್ಮುಖರಾಗಿರುವ ಬಗೆಯನ್ನು ವಿವರಿಸುವುದು ಮಾತ್ರವಲ್ಲದೆ ಅವರು ಬೇರೆ ಬೇರೆ ವಿಷಯಗಳ ಮೇಲೆ ಹೊಂದಿರುವಂತಹ ಅಗಾಧವಾದ ಜ್ಞಾನ ಪಾಂಡಿತ್ಯದ ಸಂಕೇತವಾಗಿಯೂ ಅವರ ಬದುಕನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಈ ದೇಶದ ಆರ್ಥಿಕ ಅಭಿವೃದ್ಧಿ ಸಿದ್ಧಾಂತದ ಪ್ರತಿಪಾದಕರಾಗಿ, ರೈತ ಚಳವಳಿ, ದಲಿತ ಚಳವಳಿ, ಕಾರ್ಮಿಕ ಚಳವಳಿ, ಮಹಿಳಾ ಚಳವಳಿ, ಭಾಷಾವಾರು ಅಲ್ಪಸಂಖ್ಯಾತರನ್ನು ಒಳಗೊಂಡು ಅಲ್ಪಸಂಖ್ಯಾತರ ಚಳುವಳಿ ಹೀಗೆ ಇಡೀ ಭಾರತದ ಪರಿವರ್ತನೆಗಾಗಿ ಅವಿರತ ಶ್ರಮಿಸಿದ ಮಹಾಮಾನವತಾವಾದಿಯಾಗಿ ಅಂಬೇಡ್ಕರ್‌ರವರು ಪ್ರಮುಖರೆನಿಸಿಕೊಳ್ಳುತ್ತಾರೆ.

ಅಂಬೇಡ್ಕರ್‌ರವರ ಎಲ್ಲಾ ಹೋರಾಟಗಳೂ ಕೂಡಾ ಎಲ್ಲೋ ಒಂದು ಕಡೆ ಈ ದೇಶದ ಶೋಷಿತ ಸಮುದಾಯಗಳ ಹಕ್ಕುಗಳನ್ನು ರಕ್ಷಿಸುವುದು ಮತ್ತು ಅವುಗಳಿಗೆ ಕಾನೂನಿನ ಚೌಕಟ್ಟನ್ನು ಒದಗಿಸುವುದು. "ಸ್ಟೇಟ್ಸ್ ಆಂಡ್ ಮೈನಾರಿಟೀಸ್" 1947ರ ಕೃತಿಯಲ್ಲಿ 'ಸ್ಟೇಟ್' ಅಂದರೆ ಪ್ರಭುತ್ವ; 'ಮೈನಾರಿಟೀಸ್' ಎಂದರೆ ದೇಶದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾದ ಮತ್ತು ಶತಮಾನಗಳಿಂದ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಶೋಷಣೆಗೊಳಗಾದ ಜನಸಮುದಾಯವಾಗಿ ಬಹಳ ವಿಭಿನ್ನವಾಗಿ ವ್ಯಾಖ್ಯಾನ

ಮಾಡುವ ಜೊತೆಗೆ, ಮಹಿಳೆಯರು, ಕಾರ್ಮಿಕರು, ರೈತರು, ಪರಿಶಿಷ್ಟ ಜಾತಿ, ಪಂಗಡದ ಜನರು, ಆದಿವಾಸಿಗಳು, ಧಾರ್ಮಿಕ ಮತ್ತು ಭಾಷಾವಾರು ಅಲ್ಪಸಂಖ್ಯಾತರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುತ್ತಾರೆ. ಈ ಸಮುದಾಯಗಳ ಸಾಮುದಾಯಿಕ ಹಕ್ಕುಗಳನ್ನು ರಕ್ಷಣೆ ಮಾಡುವುದಕ್ಕಾಗಿ ಬೇರೆ ಬೇರೆ ವಿಧಿಗಳ ರೂಪದಲ್ಲಿ ಬರೆದಿರುವ ಕೃತಿಯೇ 'ಸ್ಟೇಟ್ಸ್ ಎಂಡ್ ಮೈನಾರಿಟೀಸ್'. ಹಾಗಾಗಿ ಶೋಷಣೆಗೊಳಗಾಗುತ್ತಿರುವ, ಮತ್ತು ಶೋಷಣಾ ಪ್ರವೃತ್ತಿಯಲ್ಲೇ ತೊಡಗಿರುವ ಸಮುದಾಯಗಳು ತಮ್ಮ ಸಂವಿಧಾನಬದ್ಧ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಅರಿತುಕೊಳ್ಳಲು, ಮಿಗಿಲಾಗಿ ಶೋಷಣಾ ಪ್ರವೃತ್ತಿಯಲ್ಲೇ ತೊಡಗಿರುವ ಸಮುದಾಯಗಳು ತಮ್ಮ ತಪ್ಪು ಸರಿಗಳ ಪರಾಮರ್ಶೆ ನಡೆಸುವ ದೃಷ್ಟಿಯಿಂದ ಅಂಬೇಡ್ಕರ್ ಚಿಂತನೆಗಳನ್ನು ಓದಿ ಅರ್ಥಮಾಡಿಕೊಳ್ಳಬೇಕಾಗಿದೆ.

**ಅಂಬೇಡ್ಕರ್ ಮತ್ತು ಇತರ ಸಾಮಾಜಿಕ ಸುಧಾರಕರು:**

ಬುದ್ಧನ ಕಾಲದಿಂದ ಹಿಡಿದು ಭಕ್ತಿಚಳವಳಿ, ಶರಣಚಳವಳಿ, ಬೇರೆ ಬೇರೆ ಸಮಾಜ ಸುಧಾರಕರ ಚಳುವಳಿಗಳು ಈ ದೇಶದ ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ಲಿಂಗ ತಾರತಮ್ಯಗಳ ವಿರುದ್ಧ ಪ್ರಶ್ನೆ ಮಾಡಿರುವುದು ಮತ್ತು ಹಲವಾರು ರೀತಿಯ ಕಾರ್ಯತಂತ್ರಗಳನ್ನು ಅನುಸರಿಸಿರುವುದು ನಮಗೆಲ್ಲರಿಗೂ ತಿಳಿದಿರುವ ವಿಚಾರ. ಬುದ್ಧ ಸಮಾಜವನ್ನು ತ್ಯಜಿಸಿ, ಈ ಅವ್ಯವಸ್ಥೆಗಳ ವಿರುದ್ಧ ಉತ್ತರಗಳನ್ನು ಪಡೆದುಕೊಂಡರೆ, ಇತರ ಸಾಮಾಜಿಕ ಚಿಂತಕರು ವ್ಯವಸ್ಥೆಯಲ್ಲಿದ್ದುಕೊಂಡೇ ಬೇರೆ ಬೇರೆ ಕಾರ್ಯತಂತ್ರಗಳನ್ನು ಅನುಸರಿಸಿದರು. ಆದರೆ ಈ ಅವ್ಯವಸ್ಥೆಗಳಿಗೆ ಪೋಷಕವಾಗಿರುವ ಶ್ರೇಣೀಕೃತ ವ್ಯವಸ್ಥೆಯನ್ನು ಪ್ರಶ್ನೆ ಮಾಡಿದವರಲ್ಲಿ ಡಾ. ಬಿ. ಆರ್. ಅಂಬೇಡ್ಕರ್, ಬಸವಣ್ಣ, ಮಹಾತ್ಮಾ ಜ್ಯೋತಿಬಾಪುಲೆರವರು ಅಗ್ರಗಣ್ಯ ಪಂಕ್ತಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಡಾ. ಬಿ. ಆರ್. ಅಂಬೇಡ್ಕರ್‌ರವರು, ತಾರತಮ್ಯಗಳಿಗೆ ಪೋಷಕವಾಗಿರುವ ಮೂಲಭೂತವಾದ ಅಂಶಗಳನ್ನು ಗುರುತಿಸಿ ಇವು, ಶೋಷಿತರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ನಿರಾಕರಣೆ ಮಾಡಿ, ದೇಶದ ಪ್ರಗತಿಗೆ ಕುಂದುಂಟು ಮಾಡುತ್ತದೆ. ಆದುದರಿಂದ ಅಮಾನವೀಯತೆಯನ್ನು ಸಮರ್ಥಿಸುವ ಸಂಪ್ರದಾಯ, ಆಚರಣೆಗಳನ್ನು ಪ್ರಶ್ನಿಸುವ ಮೂಲಕ ನಿರಾಕರಣೆ ಮಾಡಬೇಕೆಂದು ಜಾತಿ ವಿನಾಶ ಎಂಬ ಕೃತಿಯಲ್ಲಿ ಜಾಗ್ರತಿ ಮೂಡಿಸಿ ಅನೇಕ ಚಳುವಳಿಗಳನ್ನು ಈ ಹಿನ್ನೆಲೆಯಲ್ಲಿ ಸಂಘಟಿಸಿದರು.

ಭಾರತದ ಸಮಾಜ ಬಹುಸುಸಂಸ್ಕೃತಿಯ, ಬಹುಭಾಷೆಯ, ಬಹುಜಾತಿಯ, ಬಹುಪ್ರಾದೇಶಿಕತೆಯ, ವೈವಿಧ್ಯತೆಯನ್ನು ಪ್ರದರ್ಶನ ಮಾಡುತ್ತದೆ. ವೈವಿಧ್ಯತೆ ಬರೇ ಭಿನ್ನತೆಯ ಪ್ರಶ್ನೆ ಅಲ್ಲ, ಅಸಮಾನತೆಯ ಪ್ರಶ್ನೆಯೂ ಹೌದು. ಭಾರತವು ಒಂದು

ವೈವಿಧ್ಯತೆಯ ಸಮಾಜದೊಂದಿಗೆ ಅಸಮಾನತೆಯ ಸಮಾಜವೂ ಹೌದು. ಇಂತಹ ಸಮಾಜದಲ್ಲಿ ಪ್ರಜಾಪ್ರಭುತ್ವದ ಮಾದರಿಯನ್ನು ಪ್ರಯೋಗ ಮಾಡಿದ್ದು ಬಹಳ ಒಂದು ಎದೆಗಾರಿಕೆಯ ಹಾಗೂ ಜಾಣ್ಮೆಯ ವಿಷಯ. ಈ ಕೆಲಸವನ್ನು ಮಾಡಿದ ಪ್ರಮುಖರಲ್ಲಿ ಅಂಬೇಡ್ಕರ್‌ರವರು ಅಗ್ರಗಣ್ಯರು. ಜೊತೆಗೆ ಇಂತಹ ಭಿನ್ನತೆಯ ಅಸಮಾನ ಸಮಾಜದ ಭಾಗವಾಗಿ ಬೇರೂರಿದ್ದ ಎಲ್ಲಾ ಅನಿಷ್ಟ ಪದ್ಧತಿಗಳ ವಿರುದ್ಧ ವಿರೋಧಗಳನ್ನು ವ್ಯಕ್ತಪಡಿಸುತ್ತಲೇ ವಿವಿಧ ಸ್ತರದ ಜನರ ಬದುಕಿನ ಜೊತೆಗೆ ಅಂತರ್ಗತವಾಗಿದ್ದ ಸವಾಲುಗಳನ್ನು ವಿವಿಧ ನೆಲೆಗಳಲ್ಲಿ ಅಧ್ಯಯನ ನಡೆಸಿ ತಾನು ಕಂಡುಕೊಂಡ ಪರಿಹಾರಗಳಿಗೆ ಕಾನೂನಿನ ಚೌಕಟ್ಟು ನೀಡಿ ಸಂವಿಧಾನಬದ್ಧಗೊಳಿಸಿದ ಪ್ರಮುಖರೂ ಹೌದು. ಭಾರತದ ಪ್ರಜಾಸತ್ತೆಯ ಮೂಲ ಚುನಾವಣೆ ಮತ್ತು ಮತದಾನ, ಬ್ರಿಟಿಷ್ ಸರಕಾರಕ್ಕೆ ತೆರಿಗೆ ಪಾವತಿಸುತ್ತಿದ್ದ ಶ್ರೀಮಂತ ಜಮೀನ್ದಾರರಿಗೆ ಹಾಗೂ ಸ್ಥಳೀಯ ರಾಜರುಗಳಿಗೆ ಮಾತ್ರ ಮೀಸಲಾಗಿದ್ದ ಮತದಾನದ ಹಕ್ಕನ್ನು ಭಾರತದ ಎಲ್ಲಾ ವಯಸ್ಕರಿಗೂ ನೀಡಬೇಕೆಂದು 1928ರಲ್ಲಿ ಸೈಮನ್ ಆಯೋಗ ಹಾಗೂ ಸೌತಬರೋ ಕಮಿಷನ್ ಮುಂದೆ ಬೇಡಿಕೆಯಿತ್ತರು. ಹೀಗೆ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಶೋಷಿತ ಸಮುದಾಯಗಳಿಗೆ ನಿರಾಕರಣೆಯಾಗಿದ್ದ ಮತದಾನದ ಹಕ್ಕನ್ನು ದೊರಕಿಸಿಕೊಟ್ಟು ದೇಶದ ರಾಜಕೀಯ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಕಾನೂನುಬದ್ಧಗೊಳಿಸಿ ಶ್ಲಾಘನೀಯರಾದರು.

ಸ್ವತಂತ್ರ ಭಾರತದ ಸಚಿವ ಸಂಪುಟದಲ್ಲಿ ಮೊಟ್ಟ ಮೊದಲ ಕಾನೂನು ಮಂತ್ರಿಯಾಗಿ ತಮ್ಮ ವಿಚಾರಶೀಲ ಹಾಗೂ ಸಾಮಾಜಿಕ ನ್ಯಾಯದ ಗುಣವನ್ನು ಒಬ್ಬ ರಾಜಕಾರಣಿಯಾಗಿ ಕೂಡ ತೋರಿದರು. ಶತಶತಮಾನಗಳಿಂದ ಸಂಪ್ರದಾಯ, ಪುರುಷಪ್ರಧಾನ ವ್ಯವಸ್ಥೆಯಿಂದ ನೊಂದು ಭೀತಿಗೊಳಗಾದ ಭಾರತದ ಮಹಿಳೆಯರನ್ನು ವಿಮೋಚನೆಗೊಳಿಸುವ 'ಹಿಂದುಕೋಡ್' ನೀತಿ ಸಂಹಿತೆಗೆ ತಮ್ಮದೇ ಪಕ್ಷ ಹಾಗೂ ವಿರೋಧ ಪಕ್ಷಗಳಿಂದ ಮಾನ್ಯತೆ ಸಿಗದಿದ್ದಾಗ, ಸಚಿವ ಪದವಿಗೆ ರಾಜೀನಾಮೆ (1951ರಲ್ಲಿ ) ನೀಡಿ ತಾವೊಬ್ಬ ಸ್ತ್ರೀವಾದಿ, ಅಪ್ರತಿಮ ಸಮಾನತೆಯ ಆರಾಧಕ / ಪ್ರಜಾತಂತ್ರದ ಆರಾಧಕ ಎಂಬುದನ್ನು ಜಗತ್ತಿಗೆ ಪ್ರಾಯೋಗಿಕವಾಗಿ ನಿರೂಪಿಸಿದರು. ಮುಂದುವರಿದು, ಯಾವುದೇ ಸಮುದಾಯದ ಏಳಿಗೆ ಅಥವಾ ದೇಶದ ಪ್ರಗತಿಯನ್ನು ಅಳೆಯಬೇಕಾದರೆ ಆ ದೇಶದ ಸ್ತ್ರೀಯರ ಸ್ಥಿತಿಗತಿಯನ್ನು ಪರಿಗಣಿಸಬೇಕು ಎಂದು ಮಹಿಳೆಯರ ಸ್ಥಿತಿಗತಿಯನ್ನು ಸಮಾಜದ ಏಳಿಗೆಯ ಸೂಚ್ಯಂಕವಾಗಿ ಪರಿಗಣಿಸಿ ಆರ್ಥಿಕ ಅಭಿವೃದ್ಧಿ ಸಿದ್ಧಾಂತವನ್ನೇ ಮರು ವ್ಯಾಖ್ಯಾನಿಸಿ ಪ್ರತಿಪಾದಿಸಿದ ಸ್ತ್ರೀವಾದಿಯಾಗಿಯೂ ಇತರ ಚಿಂತಕರಿಗಿಂತ ಭಿನ್ನವಾಗಿ ಕಾಣಿಸುತ್ತಾರೆ. ಪ್ರಜಾಪ್ರಭುತ್ವವನ್ನು ಇನ್ನಷ್ಟು ಸದೃಢಗೊಳಿಸುವಲ್ಲಿ ಈ ಎಲ್ಲಾ ಅಂಶಗಳೂ ಕೂಡಾ ಬಹಳ ಪ್ರಾಮುಖ್ಯವಾಗುತ್ತದೆ.

**ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ:**

ಡಾ. ಬಿ. ಆರ್. ಅಂಬೇಡ್ಕರ್‌ರವರು 1950 ಜನವರಿ 26ರಂದು ಸಂವಿಧಾನ ಸಮರ್ಪಣಾ ಸಭೆಯಲ್ಲಿ ಮಾಡಿದ ಕೊನೆಯ ಭಾಷಣ, 1947ರಲ್ಲಿ ಪ್ರಕಟವಾದ "ಸ್ಟೇಟ್ಸ್ ಆಂಡ್ ಮೈನಾರಿಟೀಸ್" ಕೃತಿಯಲ್ಲಿ ಎತ್ತಿದ ಮೂಲಭೂತ ಪ್ರಶ್ನೆಗಳು ಮತ್ತು ಅವರು ಸಂವಿಧಾನಸಭೆಯಲ್ಲಿ ಪ್ರಧಾನ ಪಾತ್ರವಹಿಸಿ, ರೂಪುಗೊಂಡ, ಪ್ರಜಾತಂತ್ರ ವ್ಯವಸ್ಥೆಯನ್ನು ಪ್ರಧಾನವಾಗಿಟ್ಟುಕೊಂಡು, ನೈಜ ಪ್ರಜಾತಂತ್ರ ವ್ಯವಸ್ಥೆ ರೂಪುಗೊಂಡಿದೆಯೇ? ಎಂಬ ಪ್ರಶ್ನೆ ಎದುರಾದಾಗ ಅಂತಹದೊಂದು ಸಮಾಜ ರೂಪುಗೊಳ್ಳಬೇಕೆಂಬ ಆಶಯದ ಪ್ರತಿಕ್ರಿಯೆಗಳು ಸರ್ವೇ ಸಾಮಾನ್ಯ. ಹಾಗಾಗಿ ಅಂಬೇಡ್ಕರ್‌ರವರ ಕಾಲದ ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಮೌಲ್ಯಗಳು, ಪ್ರಸ್ತುತ ಸಂವಿಧಾನದ ಮೂಲಕ ನಿರ್ಮಾಣವಾದ ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವರೂಪಗಳನ್ನು ಅಂದು ಅಂಬೇಡ್ಕರ್‌ರವರು ಎತ್ತಿದ ಮೂಲಭೂತ ಪ್ರಶ್ನೆಗಳು ಮತ್ತು ಇಂದಿನ ಪ್ರಜಾತಂತ್ರ ವ್ಯವಸ್ಥೆಯ ಭಾಗವಾಗಿ ಇನ್ನೂ ಬಗೆಹರಿಯದಿರುವ ಸವಾಲುಗಳನ್ನು ಆಧಾರವಾಗಿಟ್ಟುಕೊಂಡು ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆಯ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಅಂಬೇಡ್ಕರ್‌ರವರು ತನ್ನ ಚಳುವಳಿಗಳ ಮೂಲಕ ಹಾಗೂ ಸಂವಿಧಾನ ಸಭೆಯ ಕರಡು ಸಮಿತಿಯ ಅಧ್ಯಕ್ಷರಾಗಿ, ಸಂವಿಧಾನ ಸಭೆಯಲ್ಲಿ ಶೋಷಿತ ಸಮುದಾಯಗಳ ಬದುಕು, ಸ್ಥಾನಮಾನ ಮತ್ತು ಮೂಲಭೂತ ಸಮಸ್ಯೆಗಳ ಬಗ್ಗೆ ಎತ್ತಿದ ಪ್ರಶ್ನೆಗಳು ಇಂದಿಗೂ ಬಹಳ ಮಹತ್ವದವು. ರಾಜಕೀಯ ಸ್ವಾತಂತ್ರ್ಯ ಖಾತರಿಯಾಗಿರುವ ಭಾರತದಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇನ್ನಷ್ಟು ದೂರದ ಕನಸಾಗಿವೆ. ಹೆಚ್ಚುತ್ತಿರುವ ಕೊಳಗೇರಿಗಳು, ರೈತರ ಆತ್ಮಹತ್ಯೆಗಳು, ದೌರ್ಜನ್ಯ, ಅವಮಾನ, ಅಲ್ಪಪ್ರಾತಿನಿಧ್ಯತೆಯ ಸವಾಲುಗಳು, ಮಹಿಳಾ ದೌರ್ಜನ್ಯಗಳು ಶೋಷಿತ ಸಮುದಾಯಗಳಿಗೆ ಇನ್ನೂ ನಿರಾಕರಣೆಯಾಗಿರುವ ಮೂಲಭೂತ ಸೌಕರ್ಯಗಳು ಇದಕ್ಕೆ ಸಾಕ್ಷಿಯಂತಿವೆ. ಜಾತಿ ಶೋಷಣೆಯ ಸ್ವರೂಪ ಬದಲಾಗಿದ್ದರೂ, ಅಸ್ಪೃಶ್ಯತೆ, ಲೈಂಗಿಕ ತಾರತಮ್ಯಗಳು ಹೊಸ ರೂಪಗಳಲ್ಲಿ ಇನ್ನಷ್ಟು ಕ್ರೂರವಾಗಿ ಮುಂದುವರೆದಿದೆ. ಹಾಗಾಗಿ ಇಂತಹ ಅಸಂವಿಧಾನಿಕ ಮಾದರಿಯ ಸವಾಲುಗಳು ವಿಶೇಷವಾಗಿ, ವ್ಯಕ್ತಿಯ ಸ್ವಾಭಿಮಾನವನ್ನೇ ಕೆಣಕುವ ಪ್ರವೃತ್ತಿಗಳು ಸಮಾಜದಲ್ಲಿ ಎಲ್ಲಿಯವರೆಗೆ ಅಸ್ತಿತ್ವದಲ್ಲಿ ಇರುತ್ತವೆಯೋ ಅಲ್ಲಿಯವರೆಗೂ ಅಂಬೇಡ್ಕರ್‌ರವರ ಚಿಂತನೆಗಳಿಗೆ ಮಹತ್ವ ಇದ್ದೇ ಇರುತ್ತದೆ. ಈ ಕಾರಣದಿಂದ ಜಾತಿ, ಧರ್ಮ, ಜನಾಂಗ, ಲಿಂಗತಾರತಮ್ಯಗಳನ್ನು ಮೀರಿದ ಮಾನವತೆಯ ಸಮಾಜವನ್ನು ಸಾಂವಿಧಾನಿಕ ಮೌಲ್ಯಗಳಡಿಯಲ್ಲಿ ಕಟ್ಟಿಕೊಳ್ಳುವ ಭಾಗವಾಗಿ ನಡೆಯುತ್ತಿರುವ ಎಲ್ಲಾ ಹೋರಾಟಗಳ ಭಾಗವಾಗಿ ಹಾಗೂ ಅನ್ಯಾಯ, ಅಧರ್ಮಗಳ ವಿರುದ್ಧ ದನಿಯೆತ್ತಿ, ಪ್ರತಿಭಟನೆ ಮತ್ತು

ಪ್ರತಿಕ್ರಿಯೆಗಳನ್ನು ಅಹಿಂಸಾತ್ಮಕವಾಗಿ ಸಾಂವಿಧಾನಿಕ ನೆಲೆಯಲ್ಲಿ ವ್ಯಕ್ತಪಡಿಸುವಲ್ಲಿ, ಜೊತೆಗೆ ಆಡಳಿತಗಾರರ ಸಾಮಾಜಿಕ ಕಾಳಜಿಯನ್ನು ಸಂವಿಧಾನಬದ್ಧವಾಗಿ ಪ್ರಭಾವಿಸುವ, ಮತ್ತು ವಿಸ್ತರಿಸುವ ಕಾರ್ಯಗಳಲ್ಲಿ ಅಂಬೇಡ್ಕರ್‌ರವರು ನೆರವಿಗೆ ಬರುತ್ತಾರೆ.

ಕೊನೆಯದಾಗಿ ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳ 'ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ತತ್ವ'ದಂತೆ, ಧ್ವನಿಯಿಲ್ಲದ ಸಮುದಾಯಗಳಿಗೆ ಧ್ವನಿಯಾಗುವ ಮೂಲಕ ಇಡೀ ದೇಶದ ಆಡಳಿತವನ್ನು ಎಲ್ಲರನ್ನು ಒಳಗೊಳ್ಳುವ ಎಲ್ಲರ ಅಭಿವೃದ್ಧಿಗೆ ಶ್ರಮಿಸುವ, ಕಾನೂನಿನ ಪ್ರಭುತ್ವದ, ಎಲ್ಲರಿಗೂ ಸಮಾನ ಪಾಲು, ಸಮಾನ ಬದುಕನ್ನು, ದೌರ್ಜನ್ಯ ಮುಕ್ತ ಆಡಳಿತ ವ್ಯವಸ್ಥೆಯಾಗಿ ರೂಪಿಸುವ ಮಹತ್ವಪೂರ್ಣ ಸಾಂವಿಧಾನಿಕ ಜವಾಬ್ದಾರಿಗಳ ಭಾಗವಾಗಿ ಅಂಬೇಡ್ಕರ್ ಚಿಂತನೆಗಳು ಪ್ರಸ್ತುತ.

## ಪರಾಮರ್ಶನ ಗ್ರಂಥಗಳು:

1. ಅಂಬೇಡ್ಕರ್ ಬಿ. ಆರ್. , (1995), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರೈಟಿಂಗ್ಸ್ ಆಂಡ್ ಸ್ಪೀಚಸ್: ಸಂಪುಟ–14, ಭಾಗ–1, ಎಜ್ಯುಕೇಶನ್ ಡಿಪಾರ್ಟ್ಮೆಂಟ್, ಗೌರ್ನಮೆಂಟ್ ಆಫ್ ಮಹಾರಾಷ್ಟ್ರ , ಮಹಾರಾಷ್ಟ್ರ .
2. ಧನಂಜಯ್ ಕೀರ್, (1954), ಡಾ. ಅಂಬೇಡ್ಕರ್ ಲೈಫ್ ಆಂಡ್ ಮಿಶನ್ ಬಾಂಬೇ : ಪಾಪ್ಯುಲರ್ ಪ್ರಕಾಶನ, ಮುಂಬೈ.
3. ಸುಖದೇವ್ ತೋರಟ್, (2009), ದಲಿತ್ಸ್ ಇನ್ ಇಂಡಿಯಾ: ಸಚ್ ಫಾರ್‌ಯೇ ಕಾಮನ್ ಡೆಸ್ಟಿನಿ, ಸೇಜ್ ಪಬ್ಲಿಕೇಶನ್, ನ್ಯೂಡೆಲ್ಲಿ.
4. ವೋರಾ ರಾಜೇಂದ್ರ ಪಾಲ್ಶಿಕರ್ & ಸುಹಾಸ್ (ಸಂ), (2004) ಇಂಡಿಯನ್ ಡೆಮಾಕ್ರಸಿ: ಮೀನಿಂಗ್ಸ್ ಪ್ರಾಕ್ಟೀಸಸ್, ಯುನಿವರ್ಸಿಟಿ ಆಫ್ ಪುಣೆ, ಪುಣೆ.
5. ಜಾಫೆಟ್ ಎಸ್. , (2017), ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ, ಸಂಚಾಲಕರು ಡಾ. ಬಿ.ಆರ್. ಅಂಬೇಡ್ಕರ್ 125ನೇ ಜಯಂತಿಯ ವರ್ಷಾಚರಣೆಯ ಅಂತರಾಷ್ಟ್ರೀಯ ಸಮ್ಮೇಳನಾ ಆಯೋಜನಾ ಸಮಿತಿ, ಬೆಂಗಳೂರು.
6. ಆಲಿ, ಅಸ್ಘರ್, ಡೆಮಾಕ್ರಸಿ ಆಂಡ್ ಪಾಲಿಟರ್ಸ್ ಆಫ್ ಐಡೆಂಟಿಟಿ, ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲೀ, 24 ಮಾರ್ಚ್ 1998.
7. ಭಾಂಭರಿ ಸಿ. ಪಿ. , ರಿಸರ್ವೇಶನ್ಸ್ ಆಂಡ್ ಕಾಸ್ಟಿಸಂ, ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, 2005.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4. 0 International License.